ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

12

ಇಲಾಖೆ / ವಿಷಯ : DEPARTMENT / SUBJECT: ಸಂಸತ್ - ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE : 3-9-20

3-9-2020

# ಸಂಸತ್ ಅಧಿವೇಶನದಲ್ಲಿ ಪ್ರಶ್ನೋತ್ತರಕ್ಕೆ ಕೊಕ್

ನವದೆಹಲಿ: ಸೆಪ್ಟಂಬರ್ 14ರಿಂದ ಆರಂಭವಾಗಲಿರುವ ಲೋಕಸಭೆಯ ಮುಂಗಾರು ಅಧಿವೇಶನದಲ್ಲಿ ಪ್ರಶ್ನೋತ್ತರ ಅವಧಿ ಇರುವುದಿಲ್ಲ. ಆದರೆ ಸಾರ್ವಜನಿಕವಾಗಿ ಮಹತ್ವ ಇರುವ ವಿಷಯಗಳನ್ನು ಮಾತ್ರ ಪ್ರಸ್ತಾವಿಸುವುದಕ್ಕೆ ಅಲ್ಪ ಕಾಲಾವಕಾಶ ನೀಡಲಾಗುತ್ತದೆ. ಇದನ್ನು ಕಟುವಾಗಿ ಟೀಕಿಸಿರುವ ವಿಪಕ್ಷಗಳು, ಮೋದಿ ಸರ್ಕಾರದಿಂದ ಪ್ರಜಾತಂತ್ರದ ಕಗ್ಗೊಲೆ ನಡೆಯುತ್ತಿದೆ ಎಂದು ಜರೆಯಲಾರಂಭಿಸಿವೆ.

ಹದಿನೈದು ದಿನಗಳ ಈ ಅಧಿವೇಶನದಲ್ಲಿ ಶನಿವಾರ, ಭಾನುವಾರವೂ ಕಲಾಪ ನಡೆಯಲಿದೆ. ಹೀಗಾಗಿ ಲೋಕಸಭೆ ಹಾಗೂ ರಾಜ್ಯಸಭೆಯಲ್ಲಿ ಕಲಾಪ ನಡೆಸಲು ಸಾಕಷ್ಟು ಸಮಯ ದೊರೆಯಲಿದೆ. ಅಧಿವೇಶನದುದ್ದಕ್ಕೂ ಖಾಸಗಿ ಸದಸ್ಯರ ಕಲಾಪಕ್ಕೆ ಅವಕಾಶವಿಲ್ಲ ಎಂದು ರಾಜ್ಯಸಭೆಯ ಅಧಿಸೂಚನೆಯಲ್ಲಿ ವಿವರಿಸಲಾಗಿದೆ.



ಕೊರೊನಾ ಸೋಂಕಿನಿಂದ ಉದ್ಭವಿಸಿರುವ ವಿಚಿತ್ರ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಇಂತಹ ಬದಲಾವಣೆಗಳನ್ನು ಬದಲಾವಣೆಗಳನ್ನು ಮಾಡಲಾಗಿದೆ.

ಮುಂಗಾರು ಅಧಿವೇಶನದ ಮೊದಲ ದಿನ ಲೋಕಸಭೆಯಲ್ಲಿ ಮುಂಜಾನೆ ಒಂಭತ್ತರಿಂದ ಮಧ್ಯಾಹ್ನ 1 ಗಂಟೆಯವರೆಗೂ ರಾಜ್ಯಸಭೆಯಲ್ಲಿ ಮಧ್ಯಾಹ್ನ 3ರಿಂದ ರಾತ್ರಿ 7ರವರೆಗೆ ಕಲಾಪ ನಡೆಯಲಿದೆ. ಅಧಿವೇಶನದ ಇನ್ನುಳಿದ ದಿನಗಳಲ್ಲಿ ಅಕ್ಟೋಬರ್ 1ರ ಅಂತಿಮ ಕಲಾಪದವರೆಗೂ ರಾಜ್ಯಸಭೆ ಮುಂಜಾನೆ ಸಮಯದಲ್ಲಿಯೂ ಲೋಕಸಭೆ ಮಧ್ಯಾಹ್ನ ನಡೆಯಲಿದೆ. ಎರಡು ಸದನಗಳನ್ನು ಸೋಂಕು ಮುಕ್ತ ಮಾಡುವ ಪ್ರಕ್ರಿಯೆಗಾಗಿ ಎರಡು ಗಂಟೆಗಳ ಕಾಲ ವಿರಾಮ ಇರುತ್ತದೆ.

ಸಂಸತ್ತಿನ ಕಾರ್ಯಕಲಾಪದ ನಡೆದರೂ, ಪ್ರಶ್ನೋತ್ತರ ಅವಧಿಯನ್ನು ರದ್ದುಪಡಿಸಿರುವುದರ ಔಚಿತ್ಯವೇನು, ಸೋಂಕಿನ ನೆಪವೊಡ್ಡಿ ಪ್ರಜಾತಂತ್ರದ ಕಗ್ಗೊಲೆ ಮಾಡುತ್ತಿರುವುದು ಸರಿಯೇ ಎಂದು ತೃಣಮೂಲ ಕಾಂಗ್ರೆಸ್ ನಾಯಕ ಡೆರೆಕ್ ಒ ಬ್ರೇಯಿನ್ ಪ್ರಶ್ನಿಸಿದ್ದಾರೆ.

ಲೋಕಸಭೆಯಲ್ಲಿ ಕಾಂಗ್ರೆಸ್ ನಾಯಕರಾಗಿರುವ ಅಧೀರ್ ರಂಜನ್ ಚೌಧರಿಯವರು ಪ್ರಶ್ನೋತ್ತರ ಅವಧಿ ರದ್ದುಮಾಡಿರುವುದನ್ನು ಪ್ರಶ್ನಿಸಿ ಈಗಾಗಲೇ ಲೋಕಸಭಾಪತಿ ಓಂ ಬಿರ್ಲಾ ಅವರಿಗೆ ಪತ್ರ ಬರೆದಿದ್ದಾರೆ.